# ಕಂಡೆ ತಿರುಪತಿ ವೆಂಕಟೇಶನ

1. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
3. **Ref.:** Samagra Dasa Sahity, Samputa 3.1 published by Kannada & Culture Dept, Govt of Karnataka, Bengaluru.
4. **Note:** The wordings (without highlights) mainly are as per Ref. 1. The wordings in Ref. 1 and that of the singer are matching. The wordings, as per Ref. 2 & Ref. 3, are different and are given separately in yellow highlights.
5. **Note:** The Ankita are different in the books. We have considered book in Ref.2 as standard and taken that Ankita for listing.

| | |
|---|---|
| ರಾಗ ಮುಖಾರಿ ತಾಳ ಅಟ್ಟ | ರಾಗ: ಭೈರವಿ ತಾಳ: ತ್ರಿವಿಡಿ |

ಕಂಡೆ ಕಂಡೆ ಸ್ವಾಮಿಯ ಬೇಡಿಕೊಂಡೆ ॥ ಪ ॥

| | |
|---|---|
| ಕಂಡೆ ತಿರುಪತಿ ವೆಂಕಟೇಶನ | ಕಂಡೆ ತಿರುಪತಿ ವೆಂಕಟೇಶನ |
| ಕಾರುಣಾತ್ಮಕ ಸಾರ್ವಭೌಮನ | ಕಾರುಣಾತ್ಮಕ ಸಾರ್ವಭೌಮನ |
| ಕಾಮಿತಾರ್ಥಗಳೀವ ದೇವನ | ಕಾಮಿತಾರ್ಥವನೀವ ದೇವನ |
| ಕರುಣನಿಧಿ ಎಂದೆನಿಸಿ ಮೆರೆವನ ॥ ಅಪ ॥ | ಕರುಣನಿಧಿ ಎಂದೆನಿಸಿ ಮೆರೆವನ |
| | |
| ಕೋಟಿ ಸೂರ್ಯ ಪ್ರಕಾಶವೆನಿಪ | ಕೋಟಿ ಸೂರ್ಯ ಪ್ರಕಾಶವೆನಿಪ |
| ಕಿರೀಟವನು ಮಸ್ತಕದಿ ಕಂಡೆನು | ಕಿರೀಟವನು ಮಸ್ತಕದಿ ಕಂಡೆನು |
| ನೋಟಕಾಶ್ಚರ್ಯವಾದ ನಗೆ ಮುಖ | ನೋಟಕ್ಕಚ್ಚರಿಯೆನಿಪ ನಗೆಮೊಗ |
| ನೊಸಲಿನಲಿ ತಿರುಮಣಿಯ ಕಂಡೆನು | ನೊಸಲೊಳಗೆ ತಿರುಮಣಿಯ ಕಂಡೆನು |
| ಸಾಟಿಯಿಲ್ಲದೆ ಚತುರ ಹಸ್ತದಿ | ಸಾಟಿಯಿಲ್ಲದ ಶಂಖ ಚಕ್ರವ |
| ಶಂಖ ಚಕ್ರ ಗದಾಬ್ಜ ಕಂಡೆನು | ಚತುರ ಹಸ್ತದಲೀಗ ಕಂಡೆನು |
| ಬೂಟಕದ ಮಾತಲ್ಲ ಕಾಣಿರೋ | ಬೂಟಕದ ಮಾತಲ್ಲ ಕೇಳಿ |

ಭೂರಿ ದೈವರ ಗಂಡನಂಘ್ರಿಯ || 1 ||

ತಪ್ಪುಗಾಣಿಕೆ ಕಪ್ಪುಗಳನು
ಸಪ್ತ ದ್ವೀಪಗಳಿಂದ ತರಿಸುವ
ಉಪ್ಪು ಓಗರಗಳನೆ ಮಾರಿಸಿ
ಉಚಿತದಿಂದಲಿ ಹಣವ ಗಳಿಸುವ
ಇಪ್ಪತ್ತು ದುಡ್ಡಿಗೆ ಸೇರು ತೀರ್ಥವ
ಒಪ್ಪದಲಿ ಕ್ರಯ ಮಾಡಿ ಕೊಡಿಸುವ
ಸರ್ಪಶಯನನ ಸಾರ್ವಭೌಮನ
ಅಪ್ಪ ವೆಂಕಟ ರಮಣನಂಘ್ರಿಯ || 2 ||

ಉರದಿ ಸಿರಿ ದೇವಿಯಿರಲು ಕಂಡೆನು
ಉನ್ನತದಿ ಕೌಸ್ತುಭವ ಕಂಡೆನು
ಗರುಡ ಕಿನ್ನರ ನಾರದಾದಿ ಗಂ
ಧರ್ವರ ಎಡ ಬಲದಲಿ ಕಂಡೆನು
ತೆರ ತೆರದಿ ಭಕ್ತರಿಗೆ ವರಗಳ
ಕರೆದು ಕೊಡುವುದ ನಾನು ಕಂಡೆನು
ಶರಧಿ ಶಯನನ ಸಾರ್ವಭೌಮನ
ವರದ ಪುರಂದರ ವಿಠಲನಂಘ್ರಿಯ || 3 ||

ಭೂರಿ ದೈವದ ಗಂಡನಂಘ್ರಿಯ

ತಪ್ಪುಗಾಣಿಕೆ ಕಪ್ಪುಗಳನು
ಸಪ್ತ ಲೋಕಗಳಿಂದ ತರಿಸುವ
ಉಪ್ಪು ವೊಗರವನ್ನು ಮಾರಿಸಿ
ಉಚಿತದಿಂದಲಿ ಹಣವ ಗಳಿಸುವ
ಇಪ್ಪತ್ತು ದುಡ್ಡಿಗೆ ಸೇರು ತೀರ್ಥವ
ಒಪ್ಪದಿಂದ ಕ್ರಯ ಮಾಡಿ ಕೊಡಿಸುವ
ಸರ್ಪಶಯನನ ಸಾರ್ವಭೌಮನ
ಅಪ್ಪ ವೆಂಕಟ ರಮಣನಂಘ್ರಿಯ

ಉರದಿ ಶ್ರೀದೇವಿ ಇರಲು ಕಂಡೆನು
ಉನ್ನತದ ಕೌಸ್ತುಭವ ಕಂಡೆನು
ಗರುಡ ಕಿನ್ನರ ನಾರದಾದಿಗಳಿರಲು
ಎಡ ಬಲದಲ್ಲಿ ಕಂಡೆನು
ತರ ತರದಿ ಭಕ್ತರಿಗೆ ವರಗಳ
ಕರೆದು ಕೊಡುವುದ ನಾನು ಕಂಡೆನು
ಶರಧಿ ಶಯನನ ಶೇಷಗಿರಿವರ
ಸಿರಿ ಪುರಂದರ ವಿಠಲನಂಘ್ರಿಯ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ನೊಸಲು** - ಹಣೆ, ನೆತ್ತಿ, ತಲೆಯ ಮಧ್ಯಭಾಗ,

**ಬೂಟ** - ಮೋಸ, ಕಪಟ

**ಅಂಘ್ರಿ** - ಹೆಜ್ಜೆ, ಪಾದ, ಕಾಲು

**ಭೂರಿ** - ಹೆಚ್ಚು, ಅಧಿಕ, ಚಿನ್ನ, ಹೊನ್ನು, ವಿಸ್ತಾರವಾದ, ವಿಶಾಲವಾದ

**ಕ್ರಯ** - ಬೆಲೆ, ಕಿಮ್ಮತ್ತು

**ಓಗರ** - ಬೇಯಿಸಿದ ಆಹಾರ, ಅನ್ನ

**ತರ** - ಸಾಲು, ಕ್ರಮ, ಯೋಗ್ಯವಾದುದು

**ಕಾರಣಾತ್ಮಕ** = ವಿಶ್ವಕ್ಕೆ ಕಾರಣನಾದವ

**ತಿರುಮಣಿ** = ಪವಿತ್ರವಾದ ರತ್ನ (ತಿರು = ಶ್ರೀ), ತಿರುಮಣ್ಣು, ಹಣೆಯ ಮೇಲೆ ಧರಿಸುವ ಬಿಳಿಯ ನಾಮ.

**ಭೂರಿ ದೈವದ ಗಂಡ** = ದೇವೋತ್ತಮ, ಹಲವು ಕ್ಷುದ್ರ ದೇವತೆಗಳಿಗೆ ಒಡೆಯ.

**ತಪ್ಪುಗಾಣಿಕೆ** = ತಪ್ಪು ದಂಡ, ತಪ್ಪು ಕಾಣಿಕೆ; ಹರಕೆ ಹೊತ್ತು ಅದನ್ನು ನಡೆಸದಿರುವುದು ತಪ್ಪು; ಅದಕ್ಕಾಗಿ ಸಲ್ಲಿಸುವ ದಂಡ.

**ಉಪ್ಪು ವೋಗರ** = ಚಿತ್ರಾನ್ನ

**ಉಚಿತ** = ಪುಕ್ಕಟೆ

**ಒಪ್ಪ** = ಉಚಿತ ರೀತಿ

**ಸಪ್ತ ದ್ವೀಪಗಳಿಂದ** – ಎಲ್ಲೆಲ್ಲಿಂದಲೋ.

**ಉರದಿ ಸಿರಿದೇವಿ** – ಇಲ್ಲಿ ದೇವರ ಎದೆಯ ಮೇಲೆ ಲಕ್ಷ್ಮಿಯ ಮೂರ್ತಿಯಿರುವ ಆಭರಣವನ್ನು ತೊಡಿಸುತ್ತಾರೆ; ಇದು ವಕ್ಷಃಸ್ಥಳ ಲಕ್ಷ್ಮಿಯೆಂದು ಹೆಸರಾಗಿದೆ.

**ಉನ್ನತದಿ ಕೌಸ್ತುಭವ** – ಎದೆಯ ಮೇಲ್ಭಾಗದಲ್ಲಿ ಕೌಸ್ತುಭವೆಂಬ ಒಡವೆಯನ್ನು.

**ನಾರದ** = ಬ್ರಹ್ಮನ ಹತ್ತು ಮಂದಿ ಮಾನಸ ಪುತ್ರರಲ್ಲಿ ಕೊನೆಯವ. ಅವನ ತೊಡೆಯಿಂದ ಹುಟ್ಟಿದನು. ಪರಮೇಶ್ವರನ ಶಾಪದಿಂದ ಮರಳಿ ಜನ್ಮ ಪಡೆದ. ಇವನು ದೇವಾ ಋಷಿ. ತ್ರಿಲೋಕ ಸಂಚಾರಿ ಎಂಬ ಹೆಸರು ಈತನಿಗೆ ಇದೆ.

**ಕಿನ್ನರ** = ಕಶ್ಯಪ - ಸುರಸೆಯರ ಮಕ್ಕಳು. ದೇಹ ಮನುಷ್ಯರಂತೆಯೂ, ಮುಖ ಕುದುರೆಯಂತೆಯೂ ಇರುವ ಒಂದುಬಗೆಯ ದೇವಯೋನಿ ವಿಶೇಷ. ಇವರು ಕುಬೇರನ ಪುಜೆಗಳು. ಸಂಗೀತ ನಿಪುಣರು.

**ಚತುರ ಹಸ್ತದಿ** – ಇಲ್ಲಿಯ ದೇವರಿಗೆ ನಾಲ್ಕು ಕೈಗಳಿದ್ದರೂ ಶಂಖ–ಚಕ್ರಗಳಷ್ಟೇ ಕೈಲಿರುವ ಆಯುಧಗಳು; ದಾಸರು ಹೇಳಿರುವ ಗದೆ–ಪದ್ಮಗಳು ಇಲ್ಲ. ಸಾಂಪ್ರದಾಯಿಕವಾದ ಒಂದು ಒಕ್ಕಣೆಯನ್ನು ದಾಸರು ಇಲ್ಲಿ ಕಾಣಿಸಿದ್ದಾರಷ್ಟೆ.

**Classification:** Keerthane
**Ankita:** siri purandara vittala
**Location:** Tirupati
**Category:** Srinivasa stuti

**Sub-Category:** Vishnu, srinivasa, deva, devi, karune, surya, shankha, chakra, kai, pati, daiva, rokka, kappu, loka, uraga, tirtha, garuda, narada, kinnara, Samudra, anghri,
**Pravachana:** NA
**Explanation:** NA